ಶ್ರೀ ದಂತಿ ಟ್ರಾವಲ್ಸ್®

S D T

|| Sri Deviramma Prasanna ||

# Sri Danti Travels®

*Recognised by Department of Tourism, Govt. of Karnataka*

#19, I.T.I. Layout, Near State Bank of Hyderabad, B.S.K. 3rd Stage, Kattriguppe Main Road
Bangalore - 85, Ph - fax: 080 - 26917507, Mob: 9945341289 / 9845410504
URL: www.sridantitravels.com, E-mail: info@sridantitravels.com/ sridantitravels@yahoo.com

## ಸೂಪರ್ ಫಾಸ್ಟ್ ರೈಲು ಹಾಗೂ 2/2 ಸುಖಾಸೀನ ಬಸ್ಸಿನಲ್ಲಿ, ರೂಂ ವಸತಿ, ಮತ್ತು ನಮ್ಮ ಊಟೋಪಚಾರದೊಂದಿಗೆ 2012ರ ಸುವ್ಯವಸ್ಥಿತ ಪ್ರವಾಸಗಳು

- **ಪವಿತ್ರ ಅಮರನಾಥ್ ಕಾಶ್ಮೀರ ಪ್ರವಾಸ 19 ದಿನಗಳು**
  ನವದೆಹಲಿ–ಜಮ್ಮು–ಶ್ರೀನಗರ–ಬಲ್ತಾಲ್–ಅಮರನಾಥ್–ಖೀರ್‌ಭವಾನಿ–ಗುಲ್‌ಮಾರ್ಗ್–ಶಂಕರಾಚಾರ್ಯ–ದಾಲ್‌ಸರೋವರ–ಶ್ರೀವೈಷ್ಣೋದೇವಿ–ಅಮೃತ್‌ಸರ್–ಕುರುಕ್ಷೇತ್ರ–ನವದೆಹಲಿ.

  **ಜೂನ್ 21**

- **ಉತ್ತರಭಾರತ ತೀರ್ಥಕ್ಷೇತ್ರ ಮತ್ತು ಚಾರೋಧಾಮ್ ಯಾತ್ರೆ 27 ದಿನಗಳು**
  ಆಗ್ರಾ, ಮಥುರ, ಬೃಂದಾವನ್, ತಾಜ್‌ಮಹಲ್, ಅಕ್ಬರ್‌ಕೋಟೆ, ಅಲಹಾಬಾದ್, ಬುದ್ಧಗಯಾ, ಗಯಾ, ವಾರಣಾಸಿ(ಕಾಶಿ), ಅಯೋಧ್ಯಾ, ಹರಿದ್ವಾರ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಶ್ರೀಕೇದಾರನಾಥ್, ಶ್ರೀಬದರಿನಾಥ್, ಋಷಿಕೇಶ್, ನವದೆಹಲಿ.

  **ಆಗಸ್ಟ್ 30**

- **ಚಾರೋಧಾಮ್ ಪ್ರವಾಸ 19 ದಿನಗಳು**
  ನವದೆಹಲಿ–ಹರಿದ್ವಾರ–ಯಮುನೋತ್ರಿ–ಉತ್ತರಕಾಶಿ–ಗಂಗೋತ್ರಿ–ಶ್ರೀಕೇದಾರನಾಥ್–ಶ್ರೀಬದರಿನಾಥ್–ಋಷಿಕೇಶ್–ನವದೆಹಲಿ

  **ಸೆಪ್ಟೆಂಬರ್ 09**

- **ಪಂಚದ್ವಾರಕಾ ಮತ್ತು ಅಷ್ಟ ಜ್ಯೋತಿರ್ಲಿಂಗ ಯಾತ್ರೆ 24 ದಿನಗಳು**
  ಪುಷ್ಕರ್–ಕಾಂಕ್ರೋಲಿ–ಏಕಲಿಂಗ್ಜಿ–ಉದಯ್‌ಪುರ್–ಮೌಂಟ್‌ಅಬೂ–ಸಿದ್ಧಿಪುರ (ಮಾತೃಗಯಾ) ಅಹ್ಮದಾಬಾದ್–ದ್ವಾರಕಾ–ಬೇಟ್‌ದ್ವಾರಕಾ–ದಾರುಕವನಂನಾಗೇಶಂ–ಮೂಲದ್ವಾರಕಾ–ಹರಿಸಿದ್ಧಿಮಾತಾ ಪೋರ್‌ಬಂದರ್–ಸೋಮನಾಥ್–ಡಾಕೋರ್–ಉಜ್ಜೈನಿ–ಓಂಕಾರೇಶ್ವರ–ಶಿರಡಿ–ಶನಿಸಿಂಗನಾಪುರ್ ತ್ರಯಂಬಕೇಶ್ವರ್–ಭೀಮಾಶಂಕರ್–ಘೃಷ್ಣೇಶ್ವರ–ಪರ್ಲಿವೈದ್ಯನಾಥ್.

  **ನವೆಂಬರ್ 15**

- **ಪವಿತ್ರ ಕೈಲಾಸ ಮತ್ತು ಮಾನಸ ಸರೋವರ ಯಾತ್ರೆ 15 ದಿನಗಳು**
  ಕಠ್ಮಂಡು–ಮಾನಸಸರೋವರ–ಕೈಲಾಸಪರ್ವತ–ಕಠ್ಮಂಡು.

  **ಜೂನ್ 26/ ಜುಲೈ 25**

ವಿವರಗಳಿಗೆ ಸಂಪರ್ಕಿಸಿ:–


# Sri Danti Travels®

*Recognised by Department of Tourism, Govt. of Karnataka*

#19, I.T.I. Layout, Near State Bank of Hyderabad, B.S.K. 3rd Stage, Kattriguppe Main Road
Bangalore - 85, Ph - fax: 080 - 26917507, Mob: 9945341289 / 9845410504
URL: www.sridantitravels.com, E-mail: info@sridantitravels.com/ sridantitravels@yahoo.com




# ಭಾವಪೂರ್ಣ ಭಕ್ತಿಮಾರ್ಗ

ಸ್ವಾಮಿ ವಿವೇಕಾನಂದರು ಯಾವುದೇ ವಿಷಯವನ್ನು ತೆಗೆದುಕೊಂಡರೂ, ಅದರ ಉನ್ನತ ಶಿಖರಕ್ಕೆ ನಮ್ಮನ್ನು ಕರೆದೊಯ್ಯುತ್ತಾರೆ. ಭಕ್ತಿಯೋಗದ ವಿಷಯದಲ್ಲಂತೂ ಅದು ಸ್ಪಷ್ಟವಾಗಿ ಕಾಣುತ್ತದೆ. ಸಾಂಪ್ರದಾಯಿಕ ಭಕ್ತಿಶಾಸ್ತ್ರಗಳು, ತಮ್ಮ ತಮ್ಮ ಮತ, ತತ್ತ್ವ ಮತ್ತು ಪಂಗಡಗಳ ಕಟ್ಟುಪಾಡಿಗೆ ಒಳಪಟ್ಟಿವೆ. ಆದರೆ ಸ್ವಾಮೀಜಿ ಬೋಧಿಸುವ ಭಕ್ತಿಯೋಗವು ವಿಶ್ವವ್ಯಾಪಕವಾಗಿದೆ, ಸಾರ್ವಜನಿಕವಾಗಿದೆ. ಜಗತ್ತಿನ ಯಾವುದೇ ಧರ್ಮದ ಅನುಯಾಯಿಯು ಪಾಲಿಸಬಹುದಾದ ಸರ್ವೋತ್ತಮ ಮಾರ್ಗವಾಗಿದೆ. ಮೊದಲಿಗೆ ಸ್ವಾಮೀಜಿ ಭಕ್ತಿಯ ಗಳಿಕೆಗೆ ಬೇಕಾದ ಸಾಧನಗಳನ್ನು ಕೂಲಂಕಷವಾಗಿ ಚರ್ಚಿಸುತ್ತಾರೆ; ಅನಂತರ ಮೇಲುನೋಟಕ್ಕೆ ಕಾಣುವ ಸಗುಣ–ನಿರ್ಗುಣ ಬ್ರಹ್ಮದ ಪರಿಕಲ್ಪನೆಗಳ ನಡುವಣ ವೈರುಧ್ಯವನ್ನು ಪರಿಹರಿಸುತ್ತಾರೆ. ಆ ಮೂಲಕ ಪ್ರೇಮಮೂರ್ತಿಯಾದ, ನಮ್ಮ ಪ್ರೇಮಾರಾಧನೆಯ ಏಕಮೇವ ಧ್ಯೇಯವಸ್ತುವಾದ ಈಶ್ವರತತ್ತ್ವದ ಪರಿಚಯವನ್ನು ಮಾಡಿಕೊಡುತ್ತಾರೆ; ಅವ್ಯಕ್ತನಾದ ಈಶ್ವರನನ್ನು ಗುರುವಿನ ಉಪದೇಶದ ಮೂಲಕ, ಪ್ರತೀಕಗಳ ಮೂಲಕ ಉಪಾಸನೆ ಮಾಡುವ ಅಗತ್ಯವನ್ನು ಎತ್ತಿಹಿಡಿಯುತ್ತಾರೆ. ಕಡೆಯದಾಗಿ, ಯಾವುದೇ ಪ್ರಾಪಂಚಿಕತೆಯ ಕಲ್ಮಷ ಅಥವಾ ಸ್ವಾರ್ಥದ ಸೋಂಕೂ ಇಲ್ಲದ ನೈಜ ಪ್ರೇಮದ ವಿವರಣೆಯನ್ನು ನೀಡುತ್ತಾರೆ. ಹಾಗೆಯೇ ದೇವರು ಎನ್ನುವ ಸಮಷ್ಟಿತತ್ತ್ವದ ಮೇಲಿನ ಪ್ರೇಮವು ವ್ಯಷ್ಟಿರೂಪವಾದ ಸಹಜೀವಿಗಳಲ್ಲಿಯೂ ಹೇಗೆ ನೈಜ ಪ್ರೀತಿಯನ್ನು ಸ್ಫುರಿಸಬಲ್ಲುದು ಎಂಬುದನ್ನು ತಿಳಿಸಿಕೊಡುತ್ತಾರೆ. ಇಲ್ಲಿ ಬೋಧಿಸಿರುವ ಭಕ್ತಿಯು ವಿಚಾರಹೀನವಾದ ಕುರುಡು ನಂಬಿಕೆಯಲ್ಲ; ವೈಚಾರಿಕತೆಯ ಅಡಿಪಾಯದ ಮೇಲೆ ನಿರ್ಮಾಣವಾದ ಪ್ರೇಮಸೌಧ. ಒಟ್ಟಿನಲ್ಲಿ ಸ್ವಾಮಿ ವಿವೇಕಾನಂದರ ಭಕ್ತಿಯೋಗವು ಯಾವುದೇ ಮಾನವನು ತಲುಪಲು ಸಾಧ್ಯವಿರುವ ಅತ್ಯುನ್ನತ, ಪರಿಪೂರ್ಣ, ಪರಿಶುದ್ಧ ಭಾವಸಾಮ್ರಾಜ್ಯದ ವಿಹಾರವಾಗಿದೆ; ನಿಷ್ಕಲ್ಮಷವಾದ ಮತ್ತು ಚಿರಂತನವಾದ ಪ್ರೇಮಗಂಗೆಯ ಪ್ರವಾಹವಾಗಿದೆ.

**ಭಕ್ತಿ ಎಂದರೆ ಏನು?:** ಭಕ್ತಿಮಾರ್ಗವೆಂದರೆ ಹೃತ್ಪೂರ್ವಕವಾಗಿ ಭಗವಂತನನ್ನು ಅರಸುವುದು. "ಈ ಅನ್ವೇಷಣೆಯು ಪ್ರೇಮದಲ್ಲಿ ಪ್ರಾರಂಭವಾಗಿ, ಪ್ರೇಮದ ಮೂಲಕವಾಗಿ, ಪ್ರೇಮದಲ್ಲಿ ಪರ್ಯವಸನವಾಗುತ್ತದೆ." ನಾರದರ ಪ್ರಕಾರ, ಭಕ್ತಿ ಎಂದರೆ ಭಗವಂತನ ಮೇಲೆ ಇಡುವ ಪರಮ ಪ್ರೇಮ. ಇದನ್ನು ಪಡೆದವನು ನಿತ್ಯತೃಪ್ತನಾಗುವನು, ಎಲ್ಲರನ್ನೂ ಪ್ರೀತಿಸುವನು, ಯಾರನ್ನೂ ದ್ವೇಷಿಸುವುದಿಲ್ಲ. ಈ ಮಾರ್ಗದಲ್ಲಿ ಭಕ್ತಿಯೇ ಸಾಧನ ಮತ್ತು ಗುರಿ ಕೂಡ. ಭಕ್ತಿಮಾರ್ಗ ಬಹಳ ಸುಲಭವಾದ ಮತ್ತು ಸ್ವಭಾವಸಹಜವಾದ ಮಾರ್ಗ. ಇದರಲ್ಲಿ ಇರುವ ಒಂದು ಅಪಾಯವೆಂದರೆ ಮತಾಂಧತೆ. ಆದರೆ ಇದು ಕಾಣಬರುವುದು ಭಕ್ತಿಯ ಕೆಳಗಿನ ಹಂತದಲ್ಲಿ ಮಾತ್ರ. ಉನ್ನತ ಭಕ್ತಿಯಲ್ಲಿ ಈ ಅಪಾಯವಿಲ್ಲ. ಏಕೆಂದರೆ ಆ ಸ್ಥಿತಿಯನ್ನು ಮುಟ್ಟಿದವನಿಗೆ ಯಾರನ್ನೂ ದ್ವೇಷಿಸಲು ಸಾಧ್ಯವಿಲ್ಲ. ಯಾರಲ್ಲಿ ಜ್ಞಾನ, ಭಕ್ತಿ ಮತ್ತು ಕರ್ಮಗಳು ಸಮರಸವಾಗಿ ಹೊಂದಿಕೊಂಡಿರುತ್ತವೆಯೋ, ಅಂಥವನೇ ನಿಜವಾದ ಭಕ್ತ. ಸ್ವಾಮಿ ವಿವೇಕಾನಂದರ ಪ್ರಕಾರ, ಪೂರ್ಣಪ್ರೇಮ ಲಭಿಸಿದಾಗ, ತಾನೇತಾನಾಗಿಯೇ ಪೂರ್ಣಜ್ಞಾನವೂ ಲಭಿಸುವುದು. ಹಾಗೆಯೇ ಪೂರ್ಣಜ್ಞಾನದ ಸ್ಥಿತಿಯಲ್ಲಿ ಪೂರ್ಣಭಕ್ತಿಯೂ ಅವಶ್ಯವಾಗಿ ಇರುವುದು.

**ಭಕ್ತಿಯ ವ್ಯಾಖ್ಯಾನಗಳು:** ಜನರು ಲೌಕಿಕ ವಿಷಯಗಳಲ್ಲಿ ತತ್ಪರತೆಯಿಂದ ಮನಸ್ಸಿಡುವುದನ್ನು ನೋಡುತ್ತೇವೆ. ಭಗವಂತನ ವಿಷಯದಲ್ಲಿ ಅಂತಹ ನಿರಂತರವಾದ, ಉತ್ಸಾಹಪೂರಿತವಾದ ಮನನವನ್ನೇ 'ಭಕ್ತಿ' ಎಂದು ಶ್ರೀಶಂಕರಾಚಾರ್ಯರು ಹೇಳುತ್ತಾರೆ. ಶ್ರೀರಾಮಾನುಜರ ಪ್ರಕಾರ ಈ ಬಗೆಯ ಉತ್ಕಟ ಸ್ಮರಣೆಯು ನಮಗೆ ಭಗವಂತನ ದರ್ಶನವನ್ನು ಮಾಡಿಸುತ್ತದೆ. ಶಾಸ್ತ್ರಗಳ ಪ್ರಕಾರ, ಪೂಜೆ ಎಂದರೆ, ಈ ಬಗೆಯ ನಿರಂತರ ಸ್ಮರಣೆಯೇ ಆಗಿದೆ. ಇಂತಹ ಸತತ ಚಿಂತನೆಯಿಂದ ಈಶ್ವರಾನುಗ್ರಹ ಲಭಿಸುತ್ತದೆ. ಆ ಮೂಲಕ ಆತ್ಮಸಾಕ್ಷಾತ್ಕಾರವೂ ಆಗುತ್ತದೆ. ಯಾವುದರ ಮೂಲಕ ಪರಮಾತ್ಮನ ಲಾಭವಾಗುವುದೋ, ಅಂತಹ ಸ್ಮರಣೆ ಅಥವಾ ಮನನಕ್ಕೇ 'ಭಕ್ತಿ' ಎಂದು ಕರೆಯುವುದು. ಯೋಗಸೂತ್ರಗಳಲ್ಲಿ (೧–೨೩) 'ಈಶ್ವರಪ್ರಣಿಧಾನ' ಎನ್ನುವ ಮಾತು ಬರುತ್ತದೆ. "ಯಾವುದರ ಮೂಲಕ ಭಗವಂತನ ಅನುಗ್ರಹ ದೊರೆತು, ಯೋಗಿಯೊಬ್ಬನ ಸಕಲ ಇಷ್ಟಾರ್ಥಗಳೂ ಈಡೇರುತ್ತವೆಯೋ ಅದೇ ಭಕ್ತಿ" ಎಂದು ಈ ಸೂತ್ರಕ್ಕೆ ಭಾಷ್ಯವನ್ನು ಬರೆದ ವ್ಯಾಸರು ಹೇಳುತ್ತಾರೆ. "ವಿಷಯಸುಖಗಳನ್ನು ಬಯಸದೆ, ಸಕಲ ಕ್ರಿಯೆಗಳನ್ನು ಗುರುಗಳಿಗೂ ಗುರುವಾದ ಪರಮಾತ್ಮನಿಗೆ ಅರ್ಪಿಸುವುದೇ ಭಕ್ತಿ" ಎಂದು ವ್ಯಾಖ್ಯಾನಕಾರನಾದ ಭೋಜ ಹೇಳುತ್ತಾನೆ. ಭಕ್ತಿಸೂತ್ರಗಳನ್ನು ಬರೆದಿರುವ ಶಾಂಡಿಲ್ಯ ಮಹರ್ಷಿಗಳು "ಭಗವಂತನ ಮೇಲೆ ಇರುವ ಅನುರಾಗವೇ ಭಕ್ತಿ" ಎನ್ನುತ್ತಾರೆ. 'ಅನು' ಎಂದರೆ ಆಮೇಲೆ ಎಂದರ್ಥ. ಇದರರ್ಥ, ಭಗವಂತನ ಸ್ವರೂಪ, ಮಹಿಮೆ ಮುಂತಾದವನ್ನು ತಿಳಿದುಕೊಂಡ ಮೇಲೆ

ಉಂಟಾಗುವ ಪ್ರೇಮ ಎಂದರ್ಥ. ಭಕ್ತ ಪ್ರಹ್ಲಾದ ಹೀಗೆ ಹೇಳುತ್ತಾನೆ: "ಅವಿವೇಕಿಗಳಿಗೆ ಅನಿತ್ಯವಾದ ವಿಷಯಗಳಲ್ಲಿ ಅವಿನಾಶಿಯಾದ ಯಾವ ಬಗೆಯ ಪ್ರೀತಿ ಇರುತ್ತದೆಯೋ, ಅಂತಹ ಪ್ರೀತಿಯು ನಿನ್ನನ್ನು ಸ್ಮರಿಸುತ್ತಿರುವಾಗ ನನ್ನನ್ನು ಎಂದಿಗೂ ಬಿಟ್ಟು ಹೋಗದಿರಲಿ." ಇದು ವಿಷ್ಣುಪುರಾಣದಲ್ಲಿ ಬರುವ ಮಾತು. ಸ್ವಾಮಿ ವಿವೇಕಾನಂದರ ಪ್ರಕಾರ ಇದೇ ಭಕ್ತಿಯ ಶ್ರೇಷ್ಠ ವಿವರಣೆ. ಒಟ್ಟಿನಲ್ಲಿ, **"ಪ್ರಾರಂಭದಲ್ಲಿ ಸಾಧಾರಣ ಉಪಾಸನೆಯ ರೂಪದಲ್ಲಿ ಆರಂಭಗೊಂಡು, ಅಂತ್ಯದಲ್ಲಿ ಈಶ್ವರನ ಮೇಲಿನ ನಿರಂತರ ಪ್ರೇಮಪ್ರವಾಹವಾಗಿ ಪರಿಣಮಿಸುವ ಮಾನಸಿಕ ಪ್ರಯತ್ನಧಾರೆಯೇ ಭಕ್ತಿ."**

**ಈಶ್ವರನೆಂದರೆ ಯಾರು?:** ಯಾರಿಂದ ಸೃಷ್ಟಿ, ಸ್ಥಿತಿ, ಪ್ರಲಯಗಳು ಉಂಟಾಗುವವೋ, ಅವನು 'ಈಶ್ವರ' ಎಂದು ಬ್ರಹ್ಮಸೂತ್ರ ಹೇಳುತ್ತದೆ. ಅನಿರ್ವಚನೀಯ ಪರಮ ಪ್ರೇಮರೂಪನೇ ಈಶ್ವರ ಎಂದು ನಾರದ ಭಕ್ತಿಸೂತ್ರ ಹೇಳುತ್ತದೆ. ಸ್ವಾಮಿ ವಿವೇಕಾನಂದರು, "ಈಶ್ವರನೆಂದರೆ ನಿರ್ಗುಣಬ್ರಹ್ಮದ ಅತ್ಯಂತ ಶ್ರೇಷ್ಠ ಅಭಿವ್ಯಕ್ತಿ; ಮಾನವನು ನಿರುಪಾಧಿಕ ಸತ್ಯವನ್ನು ತನ್ನ ಮನಸ್ಸಿನ ಮೂಲಕ ಗ್ರಹಿಸಬಲ್ಲ ಶ್ರೇಷ್ಠತಮ ಭಾವನೆ" ಎನ್ನುತ್ತಾರೆ. ಹಾಗೆಯೇ, ಭಕ್ತರು ಆರಾಧಿಸುವ ಸಗುಣ ದೇವರು ನಿರ್ಗುಣ ಬ್ರಹ್ಮನಿಗಿಂತ ಬೇರೆಯಲ್ಲ ಎನ್ನುವುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು ಎಂದು ಎಚ್ಚರಿಸುತ್ತಾರೆ. ಮುಂದೆ ಸ್ವಾಮಿ ವಿವೇಕಾನಂದರು, ಈಶ್ವರ ಅಂದರೆ ಜಗತ್ತಿನ ಸೃಷ್ಟಿಕರ್ತನು ಒಬ್ಬನೇ ಆಗಿರಲು ಸಾಧ್ಯ ಎನ್ನುವ ವಿಷಯವನ್ನು ಪುಷ್ಟೀಕರಿಸುತ್ತಾರೆ. ಮುಕ್ತರಾದ ಜೀವಿಗಳಿಗೆ ಈ ಶಕ್ತಿ ಇರುವುದಿಲ್ಲ. ಇದನ್ನು ಹೊರತು ಎಲ್ಲ ರೀತಿಯಲ್ಲಿಯೂ ಅವರು ಭಗವಂತನ ಸಮಾನಭಾವವನ್ನು ಹೊಂದಿರುತ್ತಾರೆ. ಈ ಅಂಶವನ್ನು ಶಂಕರಾಚಾರ್ಯರು ಮತ್ತು ರಾಮಾನುಜಾಚಾರ್ಯರು ಬ್ರಹ್ಮಸೂತ್ರಕ್ಕೆ ಬರೆದ ವ್ಯಾಖ್ಯಾನಗಳ ವಿಶ್ಲೇಷಣೆಯ ಮೂಲಕ ಸ್ವಾಮೀಜಿ ವಿಶದಪಡಿಸುತ್ತಾರೆ.

**ಭಕ್ತಿಯ ಗುರಿ:** ಭಕ್ತಿಯೋಗದಲ್ಲಿ ಭಕ್ತಿಯೇ ಪರಮಪುರುಷಾರ್ಥ. ಇಂದ್ರಿಯಗಳ ಸುಖಕ್ಕಿಂತ ಇದು ಉದಾತ್ತವಾದುದು. ಭಕ್ತನಿಗೆ ಸಂಸಾರದ ಕ್ಷಣಭಂಗುರ ಸುಖಕ್ಕಿಂತ ಆತ್ಮನ ನಿತ್ಯಸುಖ ಹೆಚ್ಚೆಂದು ತೋರುವುದು; ಇಂದ್ರಿಯತೃಪ್ತಿಯು ಬರಿಯ ಮಕ್ಕಳಾಟದಂತೆ ಅನಿಸುವುದು. ಅಂಥವರಿಗೆ ಮಾತ್ರ ಭಗವದ್ಭಕ್ತಿ ಮತ್ತು ಭಗವಂತ ಮಾತ್ರವೇ ಜೀವನದ ಏಕಮಾತ್ರ ಪರಮಪುರುಷಾರ್ಥವೆಂದು ತೋರುವುದು. ಈ ಸ್ಥಿತಿಯನ್ನು ತಲುಪಲು ಪ್ರಾಥಮಿಕ ಸಿದ್ಧತೆಯ ಆವಶ್ಯಕತೆಯಿದೆ. ಇದನ್ನೇ 'ಗೌಣೀ ಭಕ್ತಿ' ಎಂದು ಕರೆಯುತ್ತಾರೆ. ಇಂತಹ ಭಕ್ತಿಯಲ್ಲಿ ಆಡಂಬರ ಮತ್ತು ಮತಭ್ರಾಂತಿಗಳ ಅಪಾಯ ಇರುತ್ತದೆ. ಇದನ್ನು ಮೀರಿಹೋಗಬೇಕಾದುದು ನಮ್ಮ ಕರ್ತವ್ಯ.

**ಗುರುವಿನ ಆವಶ್ಯಕತೆ:** ಆಧ್ಯಾತ್ಮಿಕ ಜೀವನದಲ್ಲಿ ಬೇರೆಯವರ ಸಹಾಯ ಅತ್ಯಗತ್ಯ. ಆಗ ನಮ್ಮ ಬೆಳವಣಿಗೆ ಚುರುಕಾಗುತ್ತದೆ. ಇಂಥ ಉತ್ತೇಜಕಶಕ್ತಿ ಕೇವಲ ಗ್ರಂಥಾಭ್ಯಾಸದಲ್ಲಿ ನಮಗೆ ದೊರೆಯಲಾರದು. ಸ್ವಾಮೀಜಿಯವರು ಹೇಳುವಂತೆ, ಆತ್ಮಜಾಗೃತಿಗೆ ಮತ್ತೊಂದು ಜೀವದಿಂದ ಉತ್ತೇಜನ ದೊರಕಬೇಕು. ಯಾರಿಂದ ಇಂಥ ಉತ್ತೇಜನ ದೊರೆಯುವುದೋ ಅವನೇ 'ಗುರು'. ಯಾರಿಗೆ ಇದು ನೀಡಲ್ಪಡುವುದೋ ಅವನೇ 'ಶಿಷ್ಯ.' ಗುರುಶಿಷ್ಯರಿಬ್ಬರೂ ಅದ್ಭುತವ್ಯಕ್ತಿಗಳಾಗಿದ್ದಾಗ ಮಾತ್ರ ಅಸಾಧಾರಣ ಆಧ್ಯಾತ್ಮಿಕ ಶಕ್ತಿ ಉಂಟಾಗುತ್ತದೆ. ನಿಜವಾದ ಆಧ್ಯಾತ್ಮಿಕ ಹಂಬಲ ಇದ್ದಾಗ ಮಾತ್ರ ಗುರುವು ದೊರಕುವನು. ಬರಿಯ ತಾತ್ಕಾಲಿಕ ಉದ್ವೇಗದಿಂದ ಏನೂ ಪ್ರಯೋಜನವಿಲ್ಲ.

**ಶಿಷ್ಯ ಮತ್ತು ಗುರುವಿನ ಲಕ್ಷಣಗಳು:** ನಿಜವಾದ ಗುರುವು ನಮ್ಮ ನೆರವಿಗೆ ಬಂದರೆ, ಅದು ನಮಗೆ ಹೇಗೋ ಸ್ವಾಭಾವಿಕವಾಗಿ ಗೊತ್ತಾಗಿಬಿಡುತ್ತದೆ. ಆದರೆ ಅಂತಹ ಅರ್ಹತೆ ಶಿಷ್ಯನಲ್ಲಿ ಇರಬೇಕು, ಅಷ್ಟೇ. ಶಿಷ್ಯನಲ್ಲಿ ಇರಬೇಕಾದ ಮುಖ್ಯ ಗುಣಗಳೆಂದರೆ **ಪರಿಶುದ್ಧತೆ, ನೈಜ ಜ್ಞಾನಾಕಾಂಕ್ಷೆ ಮತ್ತು ದೃಢ ಪ್ರಯತ್ನ.** ಶಿಷ್ಯನಾದವನು ತನ್ನ ಸ್ವಭಾವದಲ್ಲಿ ಪವಿತ್ರ ಭಾವನೆಯನ್ನು ತಂದುಕೊಂಡಿರಬೇಕು; ಹೀನ ಪ್ರವೃತ್ತಿಗಳಿಂದ ಪಾರಾಗುವವರೆಗೆ ನಿರಂತರವಾಗಿ ಪರಿಶ್ರಮಪಡುತ್ತಿರಬೇಕು, ಹೋರಾಡುತ್ತಿರಬೇಕು. ಇದಕ್ಕೆ ಸರಿಹೊಂದುವಂತೆ ಗುರುವೂ ಕೆಲವು ಗುಣಗಳನ್ನು ಹೊಂದಿರಬೇಕಾದ್ದು ಅವಶ್ಯಕ. ಮೊದಲನೆಯದಾಗಿ, ಅವನಿಗೆ ಶಾಸ್ತ್ರಗಳ ಸಾರತತ್ತ್ವದ ಅನುಭವ ಇರಬೇಕು. ಎರಡನೆಯದಾಗಿ, ಆತನು ಪಾಪರಹಿತನಾಗಿರಬೇಕು. ಸ್ವಾಮೀಜಿ ಹೇಳುತ್ತಾರೆ, "ಚಿತ್ತವು ಶುದ್ಧವಾಗದ ತನಕ ಭಗವಂತನ ದರ್ಶನವಾಗಲಿ, ಅತೀಂದ್ರಿಯ ಸತ್ಯದ ಕ್ಷಣಿಕ ಅನುಭವವಾಗಲಿ ದೊರಕಲಾರದು." ಮೂರನೆಯದಾಗಿ, ಗುರುವು ಕೀರ್ತಿ, ಯಶಸ್ಸು ಮುಂತಾದವನ್ನು ಗಳಿಸಬೇಕೆಂಬ ಯಾವ ಸ್ವಾರ್ಥ ಉದ್ದೇಶದಿಂದಲೂ ಪ್ರೇರಿತನಾಗಿರಬಾರದು. ಆತನ ಬೋಧನೆ ಕೇವಲ ಪ್ರೇಮದಿಂದ ಪ್ರೇರಿತವಾಗಿರಬೇಕು. ಆಧ್ಯಾತ್ಮಿಕತೆಯನ್ನು ಎಲ್ಲೆಂದರಲ್ಲಿ ಕಲಿಯಲಾಗುವುದಿಲ್ಲ. ಯಾರಲ್ಲಿ ಈಗಾಗಲೇ ಅಂತರಂಗದ ಹೃದಯಪದ್ಮವು ವಿಕಸಿತವಾಗಿರುವುದೋ, ಅವನು ಮಾತ್ರವೇ ಆಧ್ಯಾತ್ಮಿಕತೆಯನ್ನು ಸ್ವೀಕರಿಸಬಲ್ಲ. ಅಂತರಂಗದ ಈ ಕಮಲವನ್ನು ಅರಳಿಸುವಂತೆ ಮಾಡುವ ಜ್ಯೋತಿ ಬರುವುದು ಶ್ರೇಷ್ಠ ಆಧ್ಯಾತ್ಮಿಕ ಗುರುವಿನಿಂದ ಮಾತ್ರ. ಹೀಗೆ ಜಿಜ್ಞಾಸುವಿನ ಕಣ್ಣು ತೆರೆಯುವಂತೆ ಮಾಡುವವನೇ ಗುರು. ಗುರುಶಿಷ್ಯರ ಸಂಬಂಧ ಅತ್ಯಂತ ಮಹತ್ವವಾದುದು. ಗುರುವಿನ ಮೇಲೆ ಶ್ರದ್ಧೆ, ಭಕ್ತಿ, ವಿನಯ ಮತ್ತು ಗೌರವಗಳಿಲ್ಲದೆ ಇದ್ದರೆ ಶಿಷ್ಯನಲ್ಲಿ ಯಾವ ಆಧ್ಯಾತ್ಮಿಕ ವಿಕಾಸವೂ ಆಗುವುದಿಲ್ಲ. ಆಧ್ಯಾತ್ಮಿಕ ಸಾಧಕರಿಗೆ ಸ್ವಾಮಿ ವಿವೇಕಾನಂದರು ಹೇಳುವ ಕಿವಿಮಾತು ಇದು: **"ದೇವರು ಕಳುಹಿಸಿದ ಗುರು ಬಂದಾಗ ಸರಳಭಾವದಿಂದ ಅವನನ್ನು ಸೇವಿಸಿ. ಅವನಿಗೆ ನಿಮ್ಮ ಹೃದಯವನ್ನೆಲ್ಲ ಯಾವ ಸಂಕೋಚವೂ ಇಲ್ಲದೆ ಸಮರ್ಪಿಸಿ."**

**ಗುರುಗಳಾಗಿ ಅವತಾರಪುರುಷರು:** ಸಾಧಾರಣ ಗುರುಗಳಿಗಿಂತ ಮೇಲಿನ ಮಟ್ಟದಲ್ಲಿರುವ, ಪರಮಶ್ರೇಷ್ಠರಾದ ಗುರುಗಳೇ ಅವತಾರಪುರುಷರು. ಅವರು ಗುರುಗಳ ಗುರುಗಳು. ಕೇವಲ ಸ್ಪರ್ಶಮಾತ್ರದಿಂದ, ಇಚ್ಛಾಮಾತ್ರದಿಂದ ಅನುಗ್ರಹಿಸಬಲ್ಲ ಶಕ್ತಿ ಅವರಿಗಿದೆ. ಮಾನವನ ಮೂಲಕ ವ್ಯಕ್ತವಾಗುತ್ತಿರುವ

ಭಗವಂತನ ಆವಿರ್ಭಾವವೇ ಅವರು. ಸ್ವಾಮೀಜಿ ಹೇಳುತ್ತಾರೆ, "ಅವರ ಮೂಲಕವಲ್ಲದೆ ನಾವು ದೇವರನ್ನು ನೋಡಲಾರೆವು. ಅವರನ್ನು ಪೂಜಿಸದೆ ವಿಧಿಯಿಲ್ಲ. ನಾವು ನಿಜವಾಗಿ ಗೌರವ ಸಲ್ಲಿಸಬೇಕಾದ ವ್ಯಕ್ತಿಗಳೇ ಅವರು." ಮಾನವನನ್ನು ದೇವರಂತೆ ಕಾಣುವುದರ ಔಚಿತ್ಯವೇನು? ಅದಕ್ಕೆ ಸ್ವಾಮೀಜಿ, "ನಾವು ಎಲ್ಲಿಯವರೆಗೆ ಮನುಷ್ಯರಾಗಿ ಇರುವೆವೋ ಅಲ್ಲಿಯವರೆಗೆ ದೇವರನ್ನು ಮಾನವನಂತಲ್ಲದೆ ಬೇರೆ ರೀತಿಯಲ್ಲಿ ಭಾವಿಸಲು ಸಾಧ್ಯವೇ ಇಲ್ಲ" ಎಂದು ಹೇಳುತ್ತಾರೆ. ದೇವರಿಗೆ ಮಾನವನ ದುರ್ಬಲತೆ ಗೊತ್ತಿರುವುದರಿಂದಲೇ ಮಾನವಕೋಟಿಯ ಹಿತಕ್ಕಾಗಿ ಅವನು ಜನ್ಮಧಾರಣೆ ಮಾಡುತ್ತಾನೆ.

**ಓಂಕಾರ:** ಹಿಂದೂದರ್ಶನದ ಪ್ರಕಾರ ಇಡೀ ಪ್ರಪಂಚವು ನಾಮರೂಪಗಳಿಂದ ಆಗಿದೆ. ಇಂದ್ರಿಯವೇದ್ಯವಾದ ಈ ಪ್ರಪಂಚದ ಹಿಂದೆ ಸನಾತನವಾದ 'ಅವ್ಯಕ್ತ ಸ್ಫೋಟ' ಅಥವಾ ಅದನ್ನು ಹೊರಕ್ಕೆ ಬಿಡುವ 'ಶಬ್ದಬ್ರಹ್ಮ' ಇದೆ. ಈ ನಿತ್ಯವಾದ ಸ್ಫೋಟವೇ ಜಗತ್ತಿನ ಎಲ್ಲ ಹೆಸರುಗಳ ಪ್ರಮುಖವೂ ಮತ್ತು ಅನಂತವೂ ಆದ ಮೂಲವಸ್ತು. ಈ ಸ್ಫೋಟವನ್ನು ಸೂಚಿಸಲು ಒಂದೇ ಒಂದು ಶಬ್ದಚಿಹ್ನೆಯಿಂದ ಮಾತ್ರ ಸಾಧ್ಯ. ಅದೇ **'ಓಂಕಾರ.'** ಓಂಕಾರದ ಉಚ್ಚಾರಣೆಯಲ್ಲಿ ಎಲ್ಲ ವರ್ಣಗಳ ಉತ್ಪತ್ತಿಯ ಬಗೆಯನ್ನು ಗುರುತಿಸಬಹುದು. ಆದಕಾರಣ ಸ್ಫೋಟವನ್ನು ಸೂಚಿಸಲು ಇದೊಂದೇ ಅತಿ ಯೋಗ್ಯವಾದ ಚಿಹ್ನೆ. ಸ್ಫೋಟವೆಂಬುದು ವ್ಯಕ್ತಪ್ರಪಂಚದ ಅತ್ಯಂತ ಸೂಕ್ಷ್ಮ ಸ್ಥಿತಿ. ಇದೇ ಈಶ್ವರನ ಅಥವಾ ಸೃಷ್ಟಿಕರ್ತನಾದ ಭಗವಂತನ ಮೊದಲ ಅಭಿವ್ಯಕ್ತಿ. ಹೀಗಾಗಿ, ಓಂಕಾರವು ಈಶ್ವರನ ಚಿಹ್ನೆ ಎಂದಹಾಗಾಯಿತು. ಓಂಕಾರವು ಅಖಂಡಬ್ರಹ್ಮವನ್ನು ಸೂಚಿಸುತ್ತದೆ; ಇತರ ಮಂತ್ರಗಳು ಖಂಡಬ್ರಹ್ಮದ ಸೂಚಕಗಳಾಗಿವೆ. ಓಂಕಾರ ಮತ್ತು ಇತರ ಮಂತ್ರಗಳನ್ನು 'ವಾಚಕ' ಗಳೆಂದು ಕರೆಯಬಹುದು. ಈ ವಾಚಕಗಳು ಹೆಸರಿಸುವ ಅಥವಾ ಸೂಚಿಸುವ ಭಗವಂತನೇ ಇಲ್ಲಿ 'ವಾಚ್ಯ' ರೂಪ.

**ಪ್ರತೀಕ ಮತ್ತು ಪ್ರತಿಮೆ:** ಪ್ರತೀಕ ಎಂದರೇನು? "ಪ್ರತೀಕ ಎಂದರೆ ಭಗವಂತನ ಬದಲು ಅವನ ಸ್ಥಾನದಲ್ಲಿಟ್ಟು ಪೂಜಿಸುವ ಇತರ ವಸ್ತುಗಳು." ಪ್ರತೀಕಪೂಜೆ ಎಂದರೇನು? ಇದಕ್ಕೆ ಶ್ರೀರಾಮಾನುಜರು, "ಯಾವುದು ಬ್ರಹ್ಮವಲ್ಲವೋ ಅದನ್ನು ಬ್ರಹ್ಮವೆಂದು ಭಾವಿಸಿ ಪೂಜಿಸುವುದು" ಎನ್ನುತ್ತಾರೆ. ಸ್ವಾಮೀಜಿ ಹೇಳುವಂತೆ ಉಪಾಸನೆಗೆ ಬ್ರಹ್ಮವೇ ವಿಷಯವಾಗಬೇಕು; ಪ್ರತೀಕವೆಂಬುದು ಅದನ್ನು ಸೂಚಿಸುವ ಒಂದು ಸಂಕೇತ ಮಾತ್ರ. ಬ್ರಹ್ಮ ಸರ್ವವ್ಯಾಪಿ. ಅವನನ್ನು ನೇರವಾಗಿ ಧ್ಯಾನಿಸುವುದಾಗಲಿ, ಪೂಜಿಸುವುದಾಗಲಿ ಸಾಧ್ಯವಿಲ್ಲ. ಹಾಗೆಂದೇ ಪ್ರತೀಕವನ್ನೇ ಬ್ರಹ್ಮನೆಂದು ಭಾವಿಸಿ ಪೂಜಿಸಬೇಕು. ಇದರಿಂದ ಶ್ರೇಯಸ್ಸುಂಟಾಗುವುದು. ಪ್ರತೀಕಗಳಲ್ಲಿ ಹಲವಾರು ವಿಧಗಳಿವೆ. ಅವುಗಳಲ್ಲಿ ಪ್ರತಿಮೆ ಅಥವಾ ಮೂರ್ತಿ ಕೂಡ ಒಂದು. ಹಿಂದೆ ಹೇಳಿದಂತೆ, ಆ ಮೂರ್ತಿಯು ಪರಮಾತ್ಮನ ಸಂಕೇತವಾಗಿರಬೇಕು. ಅದರಿಂದ ಭಕ್ತಿ, ಮುಕ್ತಿಗಳು ಉಂಟಾಗುವುವು.

**ಇಷ್ಟನಿಷ್ಠೆ:** ಭಕ್ತನಾದವನು ಎಲ್ಲ ಮತಗಳಿಗೂ ಗೌರವ ಕೊಡಬೇಕು. ಆದರೆ ತನ್ನ ನಿಷ್ಠೆಯಲ್ಲಿ ಅಚಲನಾಗಿ ಇರಬೇಕು. ಸ್ವಾಮೀಜಿ ಹೇಳುವಂತೆ, ವಿಶಾಲವಾಗಿದ್ದೂ ಕೂಡ ಉತ್ಕಟವಾಗಿರುವ ಭಗವತ್‌ಪ್ರೇಮವನ್ನು ಸಾಧಿಸುವ ಮಾರ್ಗವೇ 'ಇಷ್ಟನಿಷ್ಠೆ.' ಇದಕ್ಕೆ ಒಳ್ಳೆಯ ನಿದರ್ಶನವೆಂದರೆ ಹನುಮಂತ. ಅವನು ಹೀಗೆ ಹೇಳುತ್ತಾನೆ: **"ಶ್ರೀನಾಥ ಮತ್ತು ಜಾನಕೀನಾಥ ಅಭೇದ ಎಂದು ನನಗೆ ಗೊತ್ತಿದೆ. ಆದರೂ ಕಮಲಲೋಚನನಾದ ರಾಮನೇ ನನ್ನ ಸರ್ವಸ್ವ."** ತುಳಸೀದಾಸರು ಈ ವಿಚಾರವಾಗಿ ಹೀಗೆ ಹೇಳುತ್ತಾರೆ: "ಎಲ್ಲದರ ಸಾರವನ್ನು ಹೀರಿಕೊಳ್ಳಿ, ಎಲ್ಲರೊಡನೆಯೂ ಬೆರೆಯಿರಿ. ಎಲ್ಲರ ಹೆಸರನ್ನೂ ಹೇಳಿ, ಎಲ್ಲರು ಹೇಳುವುದಕ್ಕೂ 'ಹೌದು, ಹೌದು' ಎನ್ನಿ. ಆದರೆ ಎಂದಿಗೂ ನಿಮ್ಮ ಇಷ್ಟದೇವತೆಯನ್ನು ಮರೆಯಬೇಡಿ."

**ಭಕ್ತಿಸಾಧನೆ:** "ಭಕ್ತಿಯು ನಮ್ಮ ಸ್ವಭಾವವನ್ನು ನಾಶಪಡಿಸುವುದಿಲ್ಲ. ಅದು ಪ್ರಕೃತಿಗೆ ವಿರೋಧವಾಗಿ ಹೋಗುವುದಿಲ್ಲ. ಆದರೆ ಅದಕ್ಕಿಂತಲೂ ಮತ್ತಷ್ಟು ಉತ್ತಮವಾದ, ಪ್ರಬಲವಾದ ದಾರಿಯೊಂದನ್ನು ತೋರುತ್ತದೆ." ತೀವ್ರ ಪ್ರೇಮವನ್ನು ಪಡೆಯುವುದಕ್ಕೆ ಕೆಲವು ಸಿದ್ಧತೆಗಳಿವೆ. ಅವು ಹೀಗಿವೆ: **೧. ವಿವೇಕ:** ನಾವು ನಮ್ಮ ಇಂದ್ರಿಯಗಳ ಮೂಲಕ ತೆಗೆದುಕೊಳ್ಳುವ ಸಂವೇದನೆಗಳ ವಿಷಯದಲ್ಲಿ, ಅದರಲ್ಲೂ ಆಹಾರದ ವಿಷಯದಲ್ಲಿ ಜಾಗೃತರಾಗಿರುವುದು. ಆಹಾರ ಎಂದರೆ 'ಒಳಗೆ ತೆಗೆದುಕೊಳ್ಳುವುದು' ಎಂದರ್ಥ. ಶಂಕರಾಚಾರ್ಯರ ಪ್ರಕಾರ, ಇಂದ್ರಿಯಗಳು ಅತ್ಯಾಸಕ್ತಿ ಇಲ್ಲದೆ ಕೆಲಸ ಮಾಡಿದಾಗ, ಅಂತಹ ಕೆಲಸ ಅಥವಾ ಸಂಸ್ಕಾರಗಳ ಮೊತ್ತವನ್ನು 'ಆಹಾರ' ಎನ್ನುತ್ತೇವೆ. ಶುದ್ಧ ಆಹಾರದಿಂದ ಇದು ಸಾಧ್ಯವಾಗುತ್ತದೆ. **೨. ವಿಮೋಕ:** ವಿಮೋಕ ಎಂದರೆ ಆಸೆಗಳಿಂದ ಬಿಡುಗಡೆ; ಭಗವಂತನನ್ನು ಬಿಟ್ಟು ಬೇರೇನನ್ನೂ ಆಶಿಸದಿರುವುದು. **೩. ಅಭ್ಯಾಸ :** ಮನಸ್ಸು ಯಾವಾಗಲೂ ಭಗವಂತನ ಹತ್ತಿರ ಹೋಗುವಂತೆ ಸತತ ಪ್ರಯತ್ನ ಮಾಡುವುದು, ದೇವರ ಬಗೆಗಿನ ಪುಸ್ತಕಗಳನ್ನೇ ಅಧ್ಯಯನ ಮಾಡುವುದು. ಭಗವತ್ಸ್ಮರಣೆಗೆ ಅನುಕೂಲ ಮಾಡಿಕೊಡುವ ಇನ್ನೊಂದು ಉತ್ತಮ ಸಾಧನವೆಂದರೆ 'ಸಂಗೀತ'. ೪. **ಕ್ರಿಯೆ:** ಮತ್ತೊಬ್ಬರಿಗೆ ಒಳ್ಳೆಯದನ್ನು ಮಾಡುವ ಕಾರ್ಯಗಳು ಇದರಲ್ಲಿ ಸೇರುತ್ತವೆ. ಶಾಸ್ತ್ರಗಳಲ್ಲಿ ಪಂಚ ಮಹಾಯಜ್ಞಗಳ ಬಗ್ಗೆ ಉಲ್ಲೇಖವಿದೆ. ಅಧ್ಯಯನ, ದೇವರು ಅಥವಾ ಮಹಾತ್ಮರ ಪೂಜೆ, ಪಿತೃಗಳಿಗೆ ನಮ್ಮ ಕರ್ತವ್ಯ, ಮಾನವಕೋಟಿಗೆ ನಮ್ಮ ಕರ್ತವ್ಯ ಮತ್ತು ಪ್ರಾಣಿಗಳಿಗೆ ನಮ್ಮ ಕರ್ತವ್ಯ – ಇವು ಒಬ್ಬ ಭಕ್ತನಾದವನು ಪರಿಪಾಲಿಸಲೇ ಬೇಕಾದ ಪಂಚಯಜ್ಞಗಳು. **೫. ಕಲ್ಯಾಣ:** ಕಲ್ಯಾಣ ಎಂದರೆ ಪಾವಿತ್ರ್ಯ. ಸ್ವಾಮೀಜಿ ಹೇಳುತ್ತಾರೆ, "ಯಾರು ಸತ್ಯವಂತರೋ ಅವರ ಬಳಿಗೆ ಮಾತ್ರ ಸತ್ಯನಾರಾಯಣನು ಬರುವನು" ಎಂದು. **೬. ಆರ್ಜವ :** ಆರ್ಜವ ಎಂದರೆ ನಡೆನುಡಿಗಳಲ್ಲಿ ನೇರವಾಗಿರುವುದು, ಹೃದಯದಲ್ಲಿ ಯಾವ ಕಾಠಿಣ್ಯವೂ ಇಲ್ಲದಿರುವುದು. **೭. ದಯೆ:** ಇನ್ನೊಬ್ಬರಿಗಾಗಿ ಮರುಗುವುದು **೮. ಅಹಿಂಸೆ:** ಮನೋವಾಕ್ಕಾಯವಾಗಿ ಮತ್ತೊಬ್ಬರಿಗೆ ಹಿಂಸೆ ಮಾಡದಿರುವುದು. **೯. ಅನವಸಾದ:** ಯಾವಾಗಲೂ ನಗು

ಮುಖದಿಂದ ಕೂಡಿರುವುದು. ಸ್ವಾಮೀಜಿ ಹೇಳುತ್ತಾರೆ, “ಮಂದಹಾಸದಿಂದ ಇದ್ದರೆ ಅದು ಪ್ರಾರ್ಥನೆಗಿಂತ ಬೇಗ ನಮ್ಮನ್ನು ದೇವರ ಬಳಿಗೆ ಒಯ್ಯುವುದು... ಅಳುಮೋರೆಯಿಂದ ಕೂಡಿರುವವನು ಎಂದಿಗೂ ದೇವರ ಸಮೀಪಕ್ಕೆ ಬರಲಾರ.”

**೧೦. ಉದ್ಧರ್ಷ:** ಸುಖದ ಸಂದರ್ಭದಲ್ಲಿ ಮಿತಿಮೀರಿ ಸಂತೋಷ ತೋರದೆ, ಶಾಂತವಾಗಿರುವುದು. “ನಗು, ಅಳುಗಳಿಬ್ಬರೂ ಸೋದರರು... ಎಂದಿಗೂ ಇವುಗಳಲ್ಲಿ ಒಂದು ಅತಿಗೆ ಹೋಗಕೂಡದು.”

**ವೈರಾಗ್ಯದ ಮೂಲಕ ಪರಾಭಕ್ತಿಯ ಸಾಧನೆ :** ಸ್ವಾಮಿ ವಿವೇಕಾನಂದರ ಪ್ರಕಾರ, ಮೇಲಿನ ಸಾಧನೆಗಳೆಲ್ಲವೂ ಚಿತ್ತಶುದ್ಧಿಗೆ ಮಾತ್ರ. ಆದರೆ ಯಾವುದು ಇಲ್ಲದೆಯೇ ನಾವು ಪರಾಭಕ್ತಿಯ ಕ್ಷೇತ್ರವನ್ನು ಪ್ರವೇಶ ಮಾಡಲಾರೆವೋ ಅದೇ ‘ವೈರಾಗ್ಯ.’ ಅದಿದ್ದರೆ ಮಾತ್ರ ಆಧ್ಯಾತ್ಮಿಕತೆಯು ವಿಕಸನವಾಗುವುದು. ಭಕ್ತನ ವೈರಾಗ್ಯವೆಂಬುದು ಅತ್ಯಂತ ಸ್ವಾಭಾವಿಕವಾದುದು. ವಿಷಯವಸ್ತುಗಳು ಮತ್ತು ಪಾಂಡಿತ್ಯದಿಂದ ಬರುವ ಸುಖದ ಅಭಿಲಾಷೆ ನಿಧಾನಕ್ಕೆ ಪಕ್ಕಕ್ಕೆ ಸರಿದು, ಭಗವಂತನ ಮೇಲಿರುವ ಪ್ರೇಮದ ದೆಸೆಯಿಂದ ಅವೆಲ್ಲ ಮ್ಲಾನವಾಗಿ ಕಾಣುತ್ತವೆ. ಆಗ ಭಗವದ್ಭಕ್ತಿಯು ವಿಕಾಸವಾಗಿ ‘ಪರಾಭಕ್ತಿ’ ಎನ್ನಿಸಿಕೊಳ್ಳುತ್ತದೆ. ಭಕ್ತಿಯೋಗದ ಪ್ರಕಾರ, ಎಲ್ಲ ಬಗೆಯ ಪ್ರೀತಿಯ, ಆಕರ್ಷಣೆಯ, ಆನಂದದ ಮತ್ತು ಸೌಂದರ್ಯದ ಮೂಲಸೆಲೆ ಭಗವಂತನೇ ಆಗಿದ್ದಾನೆ. ಅಂತಹ ಭಗವಂತನ ಮಹಾನ್ ಆಕರ್ಷಣೆಯ ಮುಂದೆ, ಉಳಿದೆಲ್ಲ ಆಕರ್ಷಣೆಗಳೂ ಮಾಯವಾಗುತ್ತವೆ. ಭಕ್ತನ ಹೃದಯಕ್ಕೆ ಭಗವಂತನ ಅನಂತ ಪ್ರೇಮ ಪ್ರವೇಶಿಸಿದ ಮೇಲೆ ಇತರ ಪ್ರೇಮಗಳಾವುವೂ ಅಲ್ಲಿ ಇರುವುದಿಲ್ಲ. ಇಂತಹ ವಿಶ್ವಪ್ರೇಮದ ಅದ್ಭುತ ಪ್ರವಾಹವು ಯಾರ ಹೃದಯವನ್ನು ಆವರಿಸಿದೆಯೋ, ಅವನು ಮಾನವನಲ್ಲಿ ಮಾನವನನ್ನು ಕಾಣುವುದಿಲ್ಲ, ತನ್ನ ಪ್ರೇಮೇಶ್ವರನನ್ನೇ ಕಾಣುತ್ತಾನೆ. ಪ್ರತಿಯೊಬ್ಬರಲ್ಲಿಯೂ ಅವನಿಗೆ ತನ್ನ ಆರಾಧನೆಯ ಇಷ್ಟಮೂರ್ತಿಯಾದ ಭಗವಂತನೇ ಕಾಣಿಸುತ್ತಾನೆ.

**ಪ್ರೇಮದ ಲಕ್ಷಣಗಳು :** ಪ್ರೇಮ ವ್ಯಕ್ತವಾಗುವ ಕೆಲವು ಲಕ್ಷಣಗಳಿವೆ. ಅವುಗಳಲ್ಲಿ ಮೊದಲನೆಯದು **ಪೂಜ್ಯಭಾವನೆ**– ಗೌರವ. ಎರಡನೆಯದು **ವಿರಹ** – ಪ್ರಿಯ ವ್ಯಕ್ತಿಯ ಅಗಲಿಕೆಯಿಂದ ಉಂಟಾಗುವ ಪರಮ ದುಃಖವೆಂಬ ಆಹ್ಲಾದಕರ ವೃತ್ತಿ. ಮೂರನೆಯದು, **ತದರ್ಥಪ್ರಾಣಸಂಸ್ಥಾನ** – ಪ್ರೇಮಕ್ಕಾಗಿಯೇ ಬದುಕಬೇಕು ಎಂಬ ಉಚ್ಚಸ್ಥಿತಿ. ನಾಲ್ಕನೆಯದು, **ತದೀಯತಾ** – ಭಕ್ತಿಮಾರ್ಗದಲ್ಲಿ ಪರಿಪೂರ್ಣ ಸ್ಥಿತಿಯನ್ನು ಪಡೆದು, ಭಗವಂತನನ್ನು ಪಡೆದಾಗ ಬರುವ ಸ್ಥಿತಿ. ಇಲ್ಲಿ ಭಕ್ತನು ತನ್ನನ್ನು ಸಂಪೂರ್ಣವಾಗಿ ಮರೆತು, ಯಾವುದೂ ತನಗೆ ಸೇರಿಲ್ಲವೆಂಬ, ಎಲ್ಲವೂ ಭಗವಂತನೇ ಆಗಿರುವನೆಂಬ ತಾದಾತ್ಮ್ಯದ ಸ್ಥಿತಿಯನ್ನು ಪಡೆಯುವನು.

**ಭಗವತ್‌ಪ್ರೇಮದಿಂದ ವಿಶ್ವಪ್ರೇಮ:** ಭಗವಂತನು ಸಮಷ್ಟಿ ಸ್ವರೂಪನು. ಅವನನ್ನು ಪ್ರೀತಿಸುವುದರಿಂದ ಎಲ್ಲರನ್ನೂ ಪ್ರೀತಿಸುವ ಅರ್ಹತೆ ಬರುವುದು. ಇದನ್ನೇ ಸ್ವಾಮೀಜಿ ಹೀಗೆ ಹೇಳುತ್ತಾರೆ: “ಯಾರನ್ನು ಪ್ರೀತಿಸಿದರೆ, ಇಡೀ ವಿಶ್ವವನ್ನೇ ಪ್ರೀತಿಸಬಹುದೋ, ಎಲ್ಲರ ಹೃದಯಾಂತರಾಳದಲ್ಲಿರುವ ಅಂತಹ ಚಿನ್ಮಾತ್ರಗೋಚರನಾದ ಪುರುಷನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದು ಭಕ್ತನು ಬಯಸುವನು.” ಎಲ್ಲ ಪ್ರೇಮಗಳ ಮೊತ್ತವೇ ದೇವರು. ಜೀವಿಗಳು ಬದ್ಧರಾಗಿರಲಿ, ಸಾಧಕರಾಗಿರಲಿ, ಮುಕ್ತರಾಗಿರಲಿ, ಅವರ ಒಟ್ಟು ಜೀವನಾಕಾಂಕ್ಷೆಯ ಸಾರಸಂಗ್ರಹವೇನೆಂದರೆ, ‘ಭಗವಂತನೆಂಬ ಮೂಲಭಾವನೆಯು ನಮಗೆ ಅರಿವಾದಾಗ ಮಾತ್ರ ನಾವು ವಿಶ್ವಪ್ರೇಮವನ್ನು ಪಡೆದುಕೊಳ್ಳಲು ಸಾಧ್ಯ’ ಎಂಬುದು. ಈ ಬಗೆಯಲ್ಲಿ ಭಗವತ್‌ಪ್ರೇಮದ ಮೂಲಕ ವಿಶ್ವಪ್ರೇಮ ಸ್ಫುರಿಸುವುದು. ಇದರಿಂದ ತನಗೆ ಯಾವುದೂ ಪ್ರತಿಕೂಲವಲ್ಲ, ಸುಖದುಃಖ ಎಲ್ಲವೂ ಭಗವಂತನಿಂದ ಬಂದದ್ದು ಎನ್ನುವ **‘ಆತ್ಮನಿವೇದನಾ ಭಾವನೆ’** ಮೂಡುವುದು. ಹಾಗೆಯೇ ಸ್ವಾರ್ಥವೂ ಸಂಪೂರ್ಣವಾಗಿ ನಾಶವಾಗುವುದು. ಸ್ವಾಮೀಜಿಯವರ ಪ್ರಕಾರ, ಆತ್ಮತ್ಯಾಗಕ್ಕೆ ಸದಾ ಸಿದ್ಧವಾಗಿರುವ ಶ್ರೇಷ್ಠಸ್ಥಿತಿಯನ್ನು ಮುಟ್ಟುವವರೆಗೆ ಯಾರೂ ಪರಮಭಕ್ತರಾಗಲಾರರು. ಏಕೆಂದರೆ, ಭಕ್ತಿಶಿಖರದ ತುತ್ತತುದಿಯೇ ಅದು. ನಿಜವಾದ ಭಕ್ತನು ತನಗಾಗಿ ಏನನ್ನೂ ಆಶಿಸಕೂಡದು. ತನ್ನ ಸ್ವಾರ್ಥಕ್ಕಾಗಿ ಏನನ್ನೂ ಮಾಡಬಾರದು. ಭಕ್ತನ ಹೃದಯಾಂತರಾಳದಿಂದ ಹೊರಹೊಮ್ಮುವ ಪ್ರಾರ್ಥನೆ ಇದು: **“ಹೇ ದೇವರೇ, ನಿನ್ನ ಹೆಸರಿನಲ್ಲಿ ಮುಗಿಲನ್ನು ಚುಂಬಿಸುವ ದೇಗುಲವನ್ನು ಕಟ್ಟುವರು. ನಿನ್ನ ಹೆಸರಿನಲ್ಲಿ ದೊಡ್ಡ ದಾನ ಧರ್ಮ ಮಾಡುವರು. ನಾನು ದೀನ, ನನ್ನಲ್ಲಿ ಏನೂ ಇಲ್ಲ. ಆದಕಾರಣ ನನ್ನ ದೇಹವನ್ನು ನಿನ್ನ ಪಾದಾರವಿಂದಗಳಲ್ಲಿ ಇಡುವೆನು. ದೇವರೇ, ನನ್ನನ್ನು ಕೈಬಿಡಬೇಡ.”**

**ಪರಾಭಕ್ತಿಯ ವ್ಯಾಖ್ಯಾನ:** ಈ ಹಿನ್ನೆಲೆ ಇದ್ದಾಗ ಮಾತ್ರ ಪರಾಭಕ್ತಿಯ ಬಗ್ಗೆ ತಿಳಿದುಕೊಳ್ಳಲು ನಮಗೆ ಸಾಧ್ಯ. ದೇವೀ ಭಾಗವತದ ವ್ಯಾಖ್ಯಾನ ಹೀಗಿದೆ: “ಒಂದು ಪಾತ್ರೆಯಿಂದ ಇನ್ನೊಂದು ಪಾತ್ರೆಗೆ ಎಣ್ಣೆಯನ್ನು ಸುರಿದಾಗ, ಹೇಗೆ ಅವಿಚ್ಛಿನ್ನ ಧಾರೆಯಂತೆ ಇರುವುದೋ ಹಾಗೆ ಮನಸ್ಸು ನಿರಂತರವಾಗಿ ಭಗವಂತನನ್ನು ಚಿಂತಿಸುತ್ತಿದ್ದರೆ, ಅದೇ ಪರಾಭಕ್ತಿ.” ಸ್ವಾಮೀಜಿ ಹೇಳುತ್ತಾರೆ, “ಅವಿಚ್ಛಿನ್ನವಾಗಿ, ನಿರಂತರವಾಗಿ ಅಗಲಿಕೆಯನ್ನು ಅರಿಯದ ಆಸಕ್ತಿಯಿಂದ, ಮನೋಬುದ್ಧಿಗಳ ಮೂಲಕ ಭಗವಂತನನ್ನು ಚಿಂತಿಸುತ್ತಿರುವುದೇ ಶ್ರೇಷ್ಠ ಪ್ರೇಮದ ಅಭಿವ್ಯಕ್ತಿ.” ಇದನ್ನು **‘ರಾಗಾನುಗಾ ಭಕ್ತಿ’** ಎಂದೂ ಕರೆಯುತ್ತಾರೆ, ಅಂದರೆ ಭಗವಂತನಲ್ಲಿ ಅನುರಾಗವನ್ನು ಪಡೆದ ಮೇಲೆ ಬರುವಂಥದ್ದು.

**ಪ್ರೇಮತ್ರಿಕೋನ :** ಇಂತಹ ಪ್ರೇಮವನ್ನು ನಾವು ಒಂದು ತ್ರಿಕೋನಕ್ಕೆ ಹೋಲಿಸಬಹುದು. ಅದರ ಒಂದೊಂದು ಕೋನವೂ ಪ್ರೇಮದ ಒಂದೊಂದು ಲಕ್ಷಣವನ್ನು ಹೇಳುವುದು. ಮೊದಲನೆಯ ಲಕ್ಷಣವೆಂದರೆ **ಪ್ರೇಮದಲ್ಲಿ ವ್ಯಾಪಾರಿ ಬುದ್ಧಿ ಅಥವಾ ಕೊಡಕೊಳ್ಳುವ ಭಾವವಿರಬಾರದು** ಎನ್ನುವುದು. ಭಗವಂತನನ್ನು ಕೇವಲ ಪ್ರೀತಿಗಾಗಿ ಪ್ರೀತಿಸಬೇಕು. ಅಂಥವನೇ ನಿಜವಾದ ಭಕ್ತ. ಸ್ವಾಮೀಜಿ ಹೇಳುತ್ತಾರೆ, “ನಿಮ್ಮ ಪ್ರೀತಿಗೆ ಪ್ರತಿ